# ನಗರಸಭಾ ಕಾರ್ಯಾಲಯ, ತುಮಕೂರು.

ನಂ.ನಸತು/ನಿನ/ಟೆಂಡರ್/ಸಿಆರ್/609/2009-10 ದಿನಾಂಕ: 05-12-2009.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ನಗರಸಭಾ ವ್ಯಾಪ್ತಿಯ ತುಮಕೂರು ನಗರಸಭೆ ವ್ಯಾಪ್ತಿಯ ಸ್ವಚ್ಚತೆ ಹಾಗೂ ಪೌರ ಘನತ್ಯಾಜ್ಯ ವಸ್ತು ನಿರ್ವಹಣೆ ಆಸಕ್ತಿಯುಳ್ಳ ಕಾರ್ಮಿಕ ಇಲಾಖೆಯಲ್ಲಿ, ಅಥವಾ ಲೋಕಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ 07-12-2009 ರಿಂದ 21-12-2009** ರವರಗೆಗೆ ಕಛೇರಿಯ ವೇಳೆಯಲ್ಲಿ ಟೆಂಡರ್ ಶುಲ್ಕ ಪಾವತಿಸಿದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.
2. ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ 22-12-2009 ರಂದು 4.30 ಗಂಟೆಯೊಳಗಾಗಿ** ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
3. **ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ 22-12-2009 ರಂದು 4.45** ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಮರುದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
4. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| ಕ್ರ.ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ ರೂಗಳಲ್ಲಿ | ಟೆಂಡರ್ ಫಾರಂ ಬೆಲೆ | ಗುತ್ತಿಗೆದಾರರು | ಕಾಲಾವಧಿ |
|---|---|---|---|---|---|---|
| 1. | **ಪ್ಯಾಕೇಜ್-1** ತುಮಕೂರು ನಗರಸಭೆ ವ್ಯಾಪ್ತಿಯ ಸ್ವಚ್ಚತೆ ಹಾಗೂ ಪೌರ ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿ. (ವಾರ್ಡ್ ನಂ. 1 ರಿಂದ 12 ರವರೆಗೆ) | 56.01 | 112500.00 | 5500+ ತೆರಿಗೆ | ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರು | 1 ವರ್ಷ |
| 2. | **ಪ್ಯಾಕೇಜ್-2** ತುಮಕೂರು ನಗರಸಭೆ ವ್ಯಾಪ್ತಿಯ ಸ್ವಚ್ಚತೆ ಹಾಗೂ ಪೌರ ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿ. (ವಾರ್ಡ್ ನಂ. 13 ರಿಂದ 19 ರವರೆಗೆ) | 86.60 | 173500.00 | 9000+ ತೆರಿಗೆ | ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರು | 1 ವರ್ಷ |
| 3. | **ಪ್ಯಾಕೇಜ್-3** ತುಮಕೂರು ನಗರಸಭೆ ವ್ಯಾಪ್ತಿಯ ಸ್ವಚ್ಚತೆ ಹಾಗೂ ಪೌರ ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿ. (ವಾರ್ಡ್ ನಂ. 20, 21, 26 ರಿಂದ 28, 30 ರಿಂದ 35 ರವರೆಗೆ) | 92.67 | 185500.00 | 9000+ ತೆರಿಗೆ | ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರು | 1 ವರ್ಷ |
| 4. | ಶೆಟ್ಟಿಹಳ್ಳಿ ಪೂರ್ವ ಮುಖ್ಯ ರಸ್ತೆಯಲ್ಲಿ ಪೈಪ್‌ಲೈನ್ ಅಳವಡಿಸುವುದು. | 7.00 | 17500.00 | 700+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರು | ಒಂದು ತಿಂಗಳು |
| 5. | ಶೆಟ್ಟಿಹಳ್ಳಿ ಪಶ್ಚಿಮ ಮುಖ್ಯ ರಸ್ತೆಯಲ್ಲಿ ಪೈಪ್‌ಲೈನ್ ಅಳವಡಿಸುವುದು. | 7.00 | 17500.00 | 700+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರು | ಒಂದು ತಿಂಗಳು |

| | | | | | | |
|---|---|---|---|---|---|---|
| 6. | ವಾರ್ಡ್ ನಂ. 2ರ ಅಂತರಸನಹಳ್ಳಿಯಲ್ಲಿ ಹೈಮಾಸ್ಟ್ ದೀಪ ಅಳವಡಿಸುವುದು. | 6.00 | 15000.00 | 600+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ವಿದ್ಯುತ್ ಗುತ್ತಿಗೆದಾರರು | ಒಂದು ತಿಂಗಳು |
| 7. | ಕೋತಿತೋಪು ವೃತ್ತದಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಟುಬಲರ್ ವಿದ್ಯುತ್ ದೀಪ ಹಾಗೂ ಕಂಬ ಅಳವಡಿಸುವುದು. | 10.00 | 25000.00 | 1000+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ವಿದ್ಯುತ್ ಗುತ್ತಿಗೆದಾರರು | ಒಂದು ತಿಂಗಳು |
| 8. | ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದಿಂದ ಕೋತಿತೊಪು ವೃತ್ತದವರೆಗೆ ಟ್ಯುಬಲರ್ ವಿದ್ಯುತ್ ದೀಪ ಹಾಗೂ ಕಂಬ ಅಳವಡಿಸುವುದು. | 14.00 | 35000.00 | 1400+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ವಿದ್ಯುತ್ ಗುತ್ತಿಗೆದಾರರು | ಒಂದು ತಿಂಗಳು |
| 9. | ಭೈರವೇಶ್ವರ ಬ್ಯಾಂಕ್‌ನಿಂದ ಎಸ್.ಐ.ಟಿ. ಮುಖ್ಯ ರಸ್ತೆಯವರೆಗೆ ಹಾಲಿ ಇರುವ ಸೋಡಿಯಂ ದೀಪವನ್ನು ತೆಗೆದು ಮೆಟಲ್ ಹೆಲೈಡ್ ದೀಪಗಳನ್ನು ಅಳವಡಿಸುವುದು. (55 ಸಂಖ್ಯೆ) | 7.00 | 17500.00 | 700+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ವಿದ್ಯುತ್ ಗುತ್ತಿಗೆದಾರರು | ಒಂದು ತಿಂಗಳು |
| 10. | ನಗರಸಭಾ ವ್ಯಾಪ್ತಿಯಲ್ಲಿ ದೊಡ್ಡ ಪ್ರಮಾಣದ ಕಸವನ್ನು ತೆಗೆಯುವುದು. | 8.00 | 20000.00 | 800+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರು | ಒಂದು ತಿಂಗಳು |
| 11. | ಶಿರಾಣಿ ರಸ್ತೆಯಲ್ಲಿ ಯುಜಿಡಿ ಪೈಪ್‌ಲೈನ್ ಅಳವಡಿಸುವುದು. | 2.00 | 5000.00 | 500+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರು | ಒಂದು ತಿಂಗಳು |

**ಷರತ್ತುಗಳು ಕ್ರಮ ಸಂಖ್ಯೆ 1 ರಿಂದ 3 ರವರೆಗೆ ಮಾತ್ರ**

1. ಗುತ್ತಿಗೆದಾರರು ತಮ್ಮ ಸಂಸ್ಥೆ ವತಿಯಿಂದ ಇಎಸ್‌ಐ, ಪಿಎಫ್‌ಐ ಮತ್ತು ಸೇವಾ ತೆರಿಗೆಗಳನ್ನು ಪಾವತಿಸಲು ಸಂಬಂಧಪಟ್ಟ ಇಲಾಖೆಯಲ್ಲಿ ನೊಂದಾಯಿತರಾಗಿರುವ ಬಗ್ಗೆ ವಿವರಣೆಯನ್ನು ಹಾಗೂ ದಾಖಲಾತಿಯನ್ನು ಟೆಂಡರ್ ದರಪಟ್ಟಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕಾಗಿರುತ್ತದೆ. ಟೆಂಡರ್ ಅನುಮೋದನೆ ಆದ ಗುತ್ತಿಗೆದಾರರು ನಗರಸಭೆಯಲ್ಲಿ ಈ ಹಿಂದೆ ನೀರು ಸರಬರಾಜು ವಿಭಾಗದಲ್ಲಿ ಹೊರ ಮೂಲದಿಂದ ಹಾಗೂ ತಾತ್ಕಾಲಿಕವಾಗಿ ಸೇವೆ ಸಲ್ಲಿಸಿದ ಕೆಲಸಗಾರರಿಗೆ ಆದ್ಯತೆ ನೀಡಿ ಅವರ ಸೇವೆಯನ್ನು ನಗರಸಭೆಗೆ ಒದಗಿಸತಕ್ಕದ್ದು. ಹಾಗೂ ಅವರಿಗೆ ಯಾವುದೇ ರೀತಿಯ ಕಿರುಕುಳ ನೀಡತಕ್ಕದ್ದಲ್ಲ.
2. ಕೆಲಸಗಾರರ ಪೈಕಿ ಯಾರಾದರು ಗೈರು ಹಾಜರಾಗಿದ್ದಲ್ಲಿ ಬದಲಿ ವ್ಯವಸ್ಥೆಯನ್ನು ಮಾಡತಕ್ಕದ್ದು.
3. ಕನಿಷ್ಟ ವೇತನ ಅಡಿಯ ಕಾಯ್ದೆಯ ಮೇರೆಗೆ ಅಂಥ ಕೆಲಸಗಾರರಿಗೆ ಕಾಲ ಕಾಲಕ್ಕೆ ನಿಗದಿಪಡಿಸಲಾಗಿರುವ ಕನಿಷ್ಟ ವೇತವನ್ನು ನಗರಸಭೆಯ / ಕಾರ್ಮಿಕ ಇಲಾಖೆ ಅಧಿಕಾರ ಸಮಕ್ಷಮ ಪ್ರತಿ ಮಾಹೆಯ ನಿಗದಿತ ದಿನಾಂಕದೊಳಗೆ ಪಾವತಿಸತಕ್ಕದ್ದು. ಹಾಗೂ ಕಾರ್ಮಿಕ ಇಲಾಖೆ ನಿಯಮಾನುಸಾರ ಸದರಿ ಕೆಲಸಗಾರರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು (ಇಪಿಎಫ್, ವಿಮೆ ಪ್ರಿಮಿಯಂ ಇತ್ಯಾದಿ) ಒದಗಿಸತಕ್ಕದ್ದು.
4. ನಿಯಮಾನುಸಾರವಾಗಿ ವೇತನ ಹಾಗೂ ಇತರೆ ಸೌಲಭ್ಯಗಳನ್ನು ಕೆಲಸಗಾರರಿಗೆ ನಿಗದಿತ ದಿನಾಂಕದೊಳಗೆ ಪಾವತಿಸದಿದ್ದಲ್ಲಿ ಕಂಟ್ರಾಕ್ಟ್ ಲೇಬರ್ (ರೆಗ್ಯುಲೇಷನ್ ಅಂಡ್ ಅಬಾಲಿಷನ್) ಅಧಿನಿಯಮ 1970ರ ಅಡಿಯಲ್ಲಿ ಸೂಕ್ತವಾಗಿ ನಿರ್ಧರಿಸಿ ಕೆಲಸಗಾರರಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ನಗರಸಭೆಯ ವತಿಯಿಂದಲೇ ಪಾವತಿಸಿ ಸದರಿ ವೆಚ್ಚವನ್ನು ಗುತ್ತಿಗೆದಾರರಿಂದ ವಸೂಲಾತಿ ಮಾಡಲಾಗುವುದು.
5. ಟೆಂಡರ್ ಅರ್ಜಿಯನ್ನು ಸಲ್ಲಿಸುವಾಗ ಕಾರ್ಮಿಕ ಇಲಾಖೆಯಲ್ಲಿ ಅರ್ಹ ದರ್ಜೆ ನೊಂದಾಯಿತರಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.
6. ನಗರದಲ್ಲಿ ಪ್ಯಾಕೇಜ್‌ಗೆ ಸಂಬಂಧಪಟ್ಟಂತೆ ಕಸ ವಿಲೇವಾರಿಯಲ್ಲಿ ಯಾವುದೇ ಸ್ಥಳದಲ್ಲಿ ಕಸ ಕಂಡು ಬಂದಲ್ಲಿ ಸದರಿ ತಿಂಗಳ ಪಾವತಿಯಲ್ಲಿ ದಿನ ಒಂದಕ್ಕೆ ಶೇಕಡ 1 ರಷ್ಟು ದಂಡ ವಿಧಿಸಲಾಗುವುದು.
7. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.
8. ಗುತ್ತಿಗೆದಾರರು ಸರಬರಾಜು ಮಾಡುವ ಕೆಲಸಗಾರರಿಗೆ ಗುರುತಿನ ಚೀಟಿ ಮತ್ತು ಸಮವಸ್ತ್ರಗಳನ್ನು ಧರಿಸಲು ನೀಡಬೇಕು.

9. ಯಾವ ಕಾರಣವನ್ನು ಸಹ ನೀಡದೆ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
10. ಮೇಲ್ಕಂಡ ವಿಷಯದಲ್ಲಿ ಏನಾದರು ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
11. ಗುತ್ತಿಗೆಯ ಕಾರ್ಯಾದೇಶ ಪಡೆದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುತ್ತೆ.
12. ಹೆಚ್ಚಿನ ವಿಷಯಗಳಿಗೆ ನಗರಸಭೆಯ ಕಛೇರಿಯ ಅಭಿಯಂತರರ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
13. ಕಾಲಕಾಲಕ್ಕೆ ಕಾರ್ಮಿಕ ಇಲಾಖೆಯಿಂದ ನೀಡುವ ಸೂಚನೆಗಳಿಗೆ ನೀವು ಬದ್ದರಾಗಿರಬೇಕು.
14. ಪೌರಕಾರ್ಮಿಕರ ಇ.ಎಸ್.ಐ. ಮತ್ತು ಪಿ.ಎಫ್.ಐ.ಗಳ ಪಾವತಿ ಸಂಬಂಧ ಮೂರು ತಿಂಗಳ ಅವಧಿಯ ಪಾವತಿ ಮೊತ್ತಕ್ಕೆ ಸಮನಾದ ಮೊತ್ತಕ್ಕೆ ಷೆಡ್ಯೂಲ್ ಬ್ಯಾಂಕ್‌ನಿಂದ ಬ್ಯಾಂಕ್ ಗ್ಯಾರಂಟಿ ಪಡೆದು ಸಲ್ಲಿಸಲು ಬದ್ದರಾಗಿರಬೇಕು.
15. ಸ್ವಚ್ಚತಾ ಕಾರ್ಯದಲ್ಲಿ ಉಂಟಾಗುವ ಯಾವುದೇ ವ್ಯತ್ಯಯ ಮತ್ತು ಕಾರ್ಯವೈಫಲ್ಯಕ್ಕೆ ಸಂಬಂಧಿಸಿದಂತೆ ಪ್ಯಾಕೇಜ್ ಒಂದಕ್ಕೆ ರೂ. 3.00 ಲಕ್ಷಗಳ ಮೊತ್ತಕ್ಕೆ ಷೆಡ್ಯೂಲ್ ಬ್ಯಾಂಕ್‌ನಿಂದ ಬ್ಯಾಂಕ್ ಗ್ಯಾರಂಟಿ ಪಡೆದು ಸಲ್ಲಿಸಲು ಬದ್ದರಾಗಿರಬೇಕು.
16. ಪ್ಯಾಕೇಜ್ ಅನುಮೋದನೆಗೊಂಡ ಗುತ್ತಿಗೆದಾರರು ಟೆಂಡರ್‌ಗೆ ಇಟ್ಟಿರುವ ಪ್ಯಾಕೇಜ್‌ನ ಮೊತ್ತಕ್ಕೆ ಶೇಕಡ 10 ರಷ್ಟು ಬ್ಯಾಂಕ್ ಗ್ಯಾರಂಟಿ ನೀಡಬೇಕು.

**ಸಹಿ/-**
**(ಹನುಮಂತರಾಯಪ್ಪ)**
**ಅಧ್ಯಕ್ಷರು**
**ನಗರಸಭೆ, ತುಮಕೂರು.**

**ಸಹಿ/-**
**(ಆದರ್ಶಕುಮಾರ್)**
**ಪೌರಾಯುಕ್ತರು**
**ನಗರಸಭೆ, ತುಮಕೂರು.**